ದಿನಾಂಕ 04-06-2022 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 5 ಮತ್ತು 6 ನೇ ಪ್ರತಿವಾದಿಗಳ ಪರ ಶ್ರೀ ಸಿ.ಬಿ.ಕೆ. ವಕೀಲರಿಂದಃ**

ಈ ದಾವೆಯನ್ನು ನಾನು ಬೇಲೂರಿನಲ್ಲಿರುವ ರಿ.ಸರ್ವೆ ನಂ.152/2 ರ 8 ಎಕರೆ 31 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಸಲ್ಲಿಸಿರುತ್ತೇನೆ. ಈ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ಹೊಳೆ, ಪಶ್ಚಿಮಕ್ಕೆ ಪೂಜಾರ ರವರ ಸ್ವತ್ತು, ಉತ್ತರಕ್ಕೆ ಸಣ್ಣ ಹಾಲಪ್ಪ ಕಾಳೇರ ರವರ ಸ್ವತ್ತು, ದಕ್ಷಿಣಕ್ಕೆ ಹೊಳೆ ಇರುತ್ತದೆ. ಈ ಸ್ವತ್ತು 2 ಮತ್ತು 3 ನೇ ಪ್ರತಿವಾದಿಗಳ ಹೆಸರಿನಲ್ಲಿ ಇರುತ್ತದೆ. ಈ ಸ್ವತ್ತು 1 ಹಾಗೂ 5 ರಿಂದ 7 ನೇ ಪ್ರತಿವಾದಿಗಳ ಜಂಟಿ ಖಾತೆಯಲ್ಲಿರುತ್ತದೆ ಎಂದರೆ ನನಗೆ ತಿಳಿದಿಲ್ಲ. 5 ನೇ ಪ್ರತಿವಾದಿ ಗುಡ್ಡಪ್ಪನ ಕಾನೂನುಬದ್ಧ ಹೆಂಡತಿಯಾಗಿದ್ದು 6 ಮತ್ತು ಮೃತ 7 ನೇ ಪ್ರತಿವಾದಿಗಳು ಗುಡ್ಡಪ್ಪನ ಖಾಸ ಮಕ್ಕಳು ಆಗಿರುವುದರಿಂದ ನಿಪಿ 1 ರ ಉತಾರದಲ್ಲಿ ಅವರ ಹೆಸರುಗಳು ಇವೆ ಎಂದರೆ ಅವರು ಯಾರು ಎಂದು ನನಗೆ ತಿಳಿದಿರುವುದಿಲ್ಲ.

2. ಸದರಿ 5, 6 ಮತ್ತು ಮೃತ 7 ನೇ ಪ್ರತಿವಾದಿಗಳು 1 ರಿಂದ 4 ನೇ ಪ್ರತಿವಾದಿಗಳ ಜೊತೆ ಅವಿಭಕ್ತ ಕುಟುಂಬದಲ್ಲಿ ವಾಸವಾಗಿರುವುದರಿಂದ ಅವರ ಹೆಸರುಗಳು ಜಂಟಿಯಾಗಿ ನಿಪಿ 1 ರಲ್ಲಿ ನಮೂದಾಗಿವೆ ಎಂದರೆ ಸರಿಯಲ್ಲ. ನಾನು ಗುಡ್ಡಪ್ಪನವರ ಕುಟುಂಬಕ್ಕೆ ಅಪರಿಚಿತ ವ್ಯಕ್ತಿ ಎಂದರೆ ಸರಿಯಲ್ಲ.

3. ಗುಡ್ಡಪ್ಪನವರು ಅವರ ಮರಣಾ ಕಾಲದಲ್ಲಿ 5 ನೇ ಪ್ರತಿವಾದಿಯೊಂದಿಗೆ ವಾಸವಾಗಿದ್ದರು ಎಂದರೆ ಸರಿಯಲ್ಲ. ನಿಪಿ 6 ರಿಂದ 15 ರ ವರೆಗಿನ ದಾಖಲೆಗಳಲ್ಲಿ 5, 6 ಹಾಗೂ ಮೃತ 7 ನೇ ಪ್ರತಿವಾದಿಯ ಹೆಸರು ಇದೆ ಎಂದರೆ ಸರಿಯಲ್ಲ.

4. ನನಗೂ ಗುಡ್ಡಪ್ಪನ ಕುಟುಂಬಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತಿನಲ್ಲಿ ಯಾವುದೇ ಭಾಗಾಂಶದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. 5 ರಿಂದ 7 ನೇ ಪ್ರತಿವಾದಿಗಳ ಹಕ್ಕಿಗೆ ದಕ್ಕೆ ತರುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಕಂಡಿಕೆ 8 ರಲ್ಲಿರುವ ಅಂಶಗಳನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.